AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ಹೊಯ್ಸಳ ರಾಜಮನೆತನದ ತವರು – ಮೂಡಿಗೆರೆಯ ಸೊಸೆಯೂರು

**ಡಾ. ಸಂಪತ್ ಬೆಟ್ಟಗೆರೆ**
ಕನ್ನಡ ಉಪನ್ಯಾಸಕರು,
ಮೂಡಿಗೆರೆ – 577113,
ಇಮೇಲ್: sampathbettagere@gmail.com

ಗತವೈಭವ ಹಾಗೂ ಪರಂಪರೆಯ ಹಿನ್ನೆಲೆಯಲ್ಲಿ ಮೂಡಿಗೆರೆಯು ಹೊಯ್ಸಳ ರಾಜವಂಶದೊಂದಿಗೆ ತಳುಕು ಹಾಕಿಕೊಂಡಿದೆ. ಐತಿಹಾಸಿಕವಾಗಿ ಇಲ್ಲಿನ ಸೊಸೆಯೂರು ಈ ನಿಟ್ಟಿನಿಂದ ಮಹತ್ವಪೂರ್ಣವಾಗಿದೆ. ಸೊಸೆಯೂರಿಗೆ ಅಂಗಡಿ, ಶಶಕಪುರ ಎಂಬ ಹೆಸರುಗಳೂ ಇರುವುದನ್ನು ಇತಿಹಾಸವು ಈಗಾಗಲೇ ದಾಖಲಿಸಿಕೊಂಡಿದೆ. ಒಂದೇ ಊರಿಗೆ ಮೂರು ಸ್ಥಳನಾಮಗಳು ಅಂಟಿಕೊಂಡಿರುವುದು ಕೂಡ ಚರಿತ್ರಾರ್ಹ ಸಂಗತಿಯೇ ಆಗಿದೆ. ಹನ್ನೊಂದು – ಹನ್ನೆರಡನೆಯ  ಶತಮಾನದ ಶಾಸನಗಳಲ್ಲಿ ಇದು ಸೊಸವೂರು ಎಂದು ಕರೆಯಲ್ಪಟ್ಟಿದೆ. ಇದಕ್ಕೊಂದು ನಿದರ್ಶನ ಎಂಬಂತೆ ಸಮೀಪದ ಕಣಚೂರು ಎಂಬ ಗ್ರಾಮದಲ್ಲಿ ದಂತಕಥೆ ಕೂಡ ಜನರ ಬಾಯಲ್ಲಿ ಪ್ರಚಲಿತವಾಗಿ ಮುಂದುವರೆದುಕೊಂಡು ಬಂದಿದೆ. ಅದರಂತೆ ಈ ಗ್ರಾಮದಲ್ಲಿನ ಸೊಸೆಯೊಬ್ಬಳು ಪತಿಯ ಮನೆಯವರ ಹಿಂಸೆಯನ್ನು ತಾಳಲಾರದೆ ಸಮೀಪದ ಹೊಳೆಗೆ ತನ್ನ ಹಸುಗೂಸಿನೊಂದಿಗೆ ಹಾರಿ ಪ್ರಾಣಾಹುತಿಯನ್ನು ಮಾಡಿಕೊಳ್ಳುತ್ತಾಳೆ. ಆದ್ದರಿಂದ ಇಲ್ಲಿಗೆ ಸೊಸೆಯೂರು ಎಂಬ ಹೆಸರು ಬಂತೆಂಬುದು. ಇದನ್ನು ಸಾಕ್ಷೀಕರಿಸಲು ಎಂಬಂತೆ ಸಾತ್ವಿಕ ಮುಖಭಾವದ ಹೆಣ್ಣುಮಗಳೊಬ್ಬಳು ಮಗುವನ್ನು ಕೈಗೆತ್ತಿಕೊಂಡು ನಿಂತಿರುವ ಕಲ್ಲಿನ ಶಾಸನಾಕೃತಿಯು ಇಲ್ಲಿನ ಹೊಳೆಯ ಬದಿ ಕಂಡುಬರುತ್ತದೆ.

ಇನ್ನು ಶಶಕಪುರ. ಶಶಕ ಎಂದರೆ ಪದಕೋಶ ಅರ್ಥದ ಪ್ರಕಾರ ಮೊಲ. ಪುರ ಎಂದರೆ ಪ್ರದೇಶ. ಹಾಗಾದರೆ ಪ್ರಾಣಿ ಸಂವೇದಿಯಾಗಿ ವಿವೇಚಿಸುವುದಾದರೆ ಇಲ್ಲಿ ಮೊಲಗಳು ಯಥೇಚ್ಚವಾಗಿ ಇದ್ದವೇ? ಎಂಬ ಪ್ರಶ್ನೆಯೂ ಒಳಗೊಳ್ಳುತ್ತದೆ. ಅದರಂತೆ ಇಲ್ಲಿನ ಹೊಳೆಯೊಂದರ ಮಡು ಅಥವಾ ಹೊಂಡವನ್ನು 'ಮೊಲಬಿದ್ದ ಕೊಂಡ' ಎಂದು ಸ್ಥಳೀಯರು ಕರೆದಾಡುವುದನ್ನು ಗಮನಿಸಿಕೊಳ್ಳಬಹುದು. ಒಂದು ಕಾಲಘಟ್ಟದಲ್ಲಿ ಹಳ್ಳ, ಹಂಚಲು, ತೊರೆ, ಹೊಳೆ, ನದಿಗಳಿಗೆ ಮೀನು ಹಿಡಿಯಲು ಬಲೆ, ಗೋರಿ, ಕೂಳಿ, ಬುಟ್ಟಿಯಂತಹ ಪರಿಕರಗಳೊಂದಿಗೆ ಗ್ರಾಮೀಣರು ಹೋಗುತ್ತಿದ್ದರು. ಈ ಸಂದರ್ಭದಲ್ಲಿ ಬಲೆಬೀಸಿ, ಗೋರಿಯಿಂದ ಗೋಚಿ, ಕೂಳಿಯಲ್ಲಿ ಸಿಲುಕಿದ ಮೀನುಗಳನ್ನು ತಂದು ಒಂದರ್ಥದಲ್ಲಿ ಮೀನಿನ ಸುಗ್ಗಿಯನ್ನೇ ಮಾಡುತ್ತಿದ್ದರು. ಜೊತೆಗೆ ಮಳೆಗಾಲದ ಸಂದರ್ಭದಲ್ಲಿ ಮೀನು ಹಚ್ಚೋ ಮಳೆ ಎಂದೇ ಒಂದೊಂದು ಮಳೆ ನಕ್ಷತ್ರವನ್ನು ಗುರುತಿಸಿಕೊಂಡು ಆ ಮಳೆಯಲ್ಲಿ ಹೊಳೆಯ ಇಕ್ಕೆಲದ ಗದ್ದೆ ಬಯಲಿಗೆ ಏರಿಳಿದ ನೀರಿನಲ್ಲಿ ಮೀನನ್ನು ಅರಸುತ್ತ ರಾತ್ರಿಯಿಡಿ ಟಾರ್ಚನ್ನು ಹಣೆಗೆ ಕಟ್ಟಿಕೊಂಡು ಅತ್ತಿಂದಿತ್ತ ಹುಡುಕಾಡುತ್ತಿದ್ದ ದಿನಗಳನ್ನು ಹಿರಿಯರು ನೆನಪಿಸಿಕೊಳ್ಳುವುದೇ ಚೆಂದ. ಆಗ ಆ ಕತ್ತಲ ನೆರಳಾಟದ ಬೆಳಕಿನಲ್ಲಿ ಕಣ್ಣಿಗೆ ಕಂಡ ಸ್ವಲ್ಪ ದೊಡ್ಡಗಾತ್ರದ ಮೀನುಗಳನ್ನು ಉದ್ದಿಕತ್ತಿಯಿಂದ ಕಡಿದು(ಹೊಡೆದು) ಕುಕ್ಕೆಗೆ ಹಾಕಿಕೊಂಡು ಬರುತ್ತಿದ್ದ ಉದಾಹರಣೆಗಳು ಮಲೆನಾಡ ಸಂಸ್ಕೃತಿಯ ಪ್ರತೀಕದ ಸ್ಮೃತಿಚಿತ್ರಗಳಾಗಿ ಈಗಲೂ ಕಾಡುತ್ತವೆ. ಇಂತಹ ಸಂದರ್ಭದಲ್ಲಿ ಮೊಲಬಿದ್ದ ಕೊಂಡದ ಬಳಿ ಮೊಲಗಳು ನೀರಿಗೆ ಬೀಳೋದು; ಮತ್ತೆ ತೇಲಿ ಮಲೇದ್ದೇಳೋದು ಮಾಡ್ತಾ ಇದ್ದರೆ.. ಎಂದರೆ ಇಂತದೊಂದು ದೃಶ್ಯ ಪರಿಕಲ್ಪನೆಗೆ ಬಂದಾಗ 'ಅಲ್ಲಿ ಹೋಗದಿರು, ಮೊಲದ ರೂಪದಲ್ಲಿ ಎಂಥದೋ ದಯ್ಯಗಿಯ್ಯ ಕುಣಿತಿದ್ದಾವೆ. ಹತ್ತಿರ ಹೋದರೆ ಪೆಟ್ಟು ಹೊಡಿತಾವೆ. ಹಾಗಾದರೆ ಇದ್ದೊಂದು ಜೀವ ಹೋಗಿ ಜೀವ್ನನೇ ಮುಗಿದು ಹೋಗುತ್ತದೆ!' ಎಂದು ತಾವು ಮಾತನಾಡಿಕೊಳ್ಳುತ್ತಿದ್ದೇವೆಂದು ಕೆಲವು ಹಿರಿಯರು ಸ್ಮರಣೆಗೆ ಆಗಾಗ ತಂದುಕೊಳ್ಳುವುದನ್ನು ಗಮನಿಸಿಕೊಳ್ಳುವಾಗ 'ಮೊಲಬಿದ್ದ ಕೊಂಡ' ಇನ್ನೊಂದು ಆಯಾಮದಿಂದಲೂ ವಿಶೇಷ ಎನಿಸಿಬಿಡುತ್ತದೆ. ಹೀಗಾಗಿ ಈ ನಿಟ್ಟಿನಿಂದಲೂ ಶಶಕಪುರ ಜನಜನಿತವಾಗಿದೆ ಎಂದು ಕಂಡುಕೊಳ್ಳಬಹುದು.

ಅಂದಹಾಗೆ ಅಂಗಡಿ. ಘಟ್ಟದಿಂದ ಕರಾವಳಿ ಪ್ರದೇಶಕ್ಕೆ ಹೋಗುವ ಮಾರ್ಗದ ಮಧ್ಯಭಾಗದಲ್ಲಿರುವ ಈ ಸ್ಥಳದಲ್ಲಿದ್ದ ಅಂಗಡಿಗಳಿಂದಾಗಿ (ವ್ಯಾಪಾರ ಕಟ್ಟೆ) ಇಲ್ಲಿನ ಸ್ಥಳಕ್ಕೆ ಇಂತದೊಂದು ಹೆಸರು ಉಲ್ಲೇಖಿಸಲ್ಪಟ್ಟಿದೆ ಎಂದು ಅಭಿಪ್ರಾಯಗಳನ್ನು ಗಮನಿಸಿಕೊಳ್ಳಬಹುದಾಗಿದೆ. ಇತಿಹಾಸದ ಪುಟಗಳಲ್ಲೂ ಇದೇ ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡಿದೆ. ಹೀಗೆ ಹತ್ತು ಹನ್ನೆರಡನೆಯ ಶತಮಾನದಲ್ಲಿ ಸೊಸವೂರು (ಸೊಸೆಯೂರು) ಎಂದು, ನಂತರದ ಹೊಯ್ಸಳರ ಪ್ರಸಿದ್ಧ ಅರಸ ವಿಷ್ಣುವರ್ಧನನ ಕಾಲಘಟ್ಟದ ಸುಮಾರಿಗೆ (1108–1152) ಶಶಪುರ, ಶಶಕಪುರ ಎಂದು, ತದನಂತರದ ವಿಜಯನಗರ ಸಾಮ್ರಾಜ್ಯ ಅರಸ ಅಚ್ಯುತರಾಯ (ಕೃಷ್ಣದೇವರಾಯನ ಮಲ ಸಹೋದರ)ನ ಹೊತ್ತಿಗೆ (1529–1542) ಅಂಗಡಿ ಎಂಬ ಹೆಸರು ಹೆಚ್ಚು ಪ್ರಚಾರಕ್ಕೆ ಬಂದಿತೆಂದು ಇತಿಹಾಸದ ವಿವರಗಳು ತಿಳಿಸುತ್ತವೆ. ಹೊಯ್ಸಳರ ರಾಜಧಾನಿಯಾದ ಇದನ್ನು ನೃಪಕಾಮ (ಕ್ರಿ.ಶ.1000–1045) ಆಳುತ್ತಿದ್ದ. ನಂತರ ಕ್ರಿ.ಶ.1062 ರಲ್ಲಿ ಆಡಳಿತಕ್ಕೆ ಬಂದ ಅವನ ಮಗನಾದ ವಿನಯಾದಿತ್ಯನು ಸೊಸೆಯೂರಿನಿಂದ (ಶಶಕಪುರ–ಅಂಗಡಿ) ಬೇಲೂರಿಗೆ ರಾಜಧಾನಿಯನ್ನು ಬದಲಾಯಿಸಿದ ಎಂಬುವುದು. ಅಂ–ದಹಾಗೆ ಇದು ಈಗ ಹಳೇಬೀಡೆಂದು ಹೆಸರಿಸಲ್ಪಟ್ಟಿರುವ ದ್ವಾರಸಮುದ್ರಕ್ಕೆ ಸ್ಥಳಾಂತರಗೊಂಡಿದ್ದೂ ಉಲ್ಲೇಖಾರ್ಹ. ಅದರಂತೆ ಮುಂದಿನ ಅರಸರು ತಮ್ಮ ತವರಿನ ನಂಟನ್ನು ಕಡಿದುಕೊಳ್ಳದೆ ಅಂಗಡಿಗೆ ಹೋಗಿ ಬರುತ್ತಿದ್ದ ಇತಿಹಾಸದ ವಿವರಗಳೂ ಇಲ್ಲಿ ವಿಶೇಷ ಎನಿಸುತ್ತವೆ. ಇದಕ್ಕೆ ಮುಖ್ಯ ಕಾರಣವನ್ನು ಅವಲೋಕಿಸಿದಾಗ ಅವರು ನಂಬಿಕೊಂಡು ಬಂದಿದ್ದ ತಮ್ಮ ಕುಲದೇವತೆ ವಾಸಂತಿಕಾ ದೇವಿ ಅಥವಾ ವಸಂತಮ್ಮಳೆಂದು ಪರಿಭಾವಿಸಬಹುದಾಗಿದೆ. ಈಗಿರುವ ಇಲ್ಲಿನ ಗುಡಿಯೊಳಗೆ ಐದು ದೇವಿಯರ ಮೂರ್ತಿಗಳಿವೆ. ಶಕ್ತಿ ದೇವತೆಗಳಂತೆ ಕಂಡು ಬರುವ ಇವು ಕೈಯಲ್ಲಿ ಆಯುಧವನ್ನು ಹಿಡಿದಿದ್ದು ಒಂದು ಪಾರ್ಶ್ವದಿಂದ ನೋಡಿದರೆ ತ್ರಿಮುಖವಾಗಿಯೂ ಗೋಚರವಾಗುತ್ತವೆ. ಬ್ರಾಹ್ಮಿ, ಮಹೇಶ್ವರಿ, ವೈಷ್ಣವಿ, ವಾರಾಹಿ, ಕೌಮಾರಿ ದೇವಿಯರೆಂದು ಗುರುತಿಸಲ್ಪಡುವ ಇವುಗಳಲ್ಲಿ ನಡುವಿನ ವೈಷ್ಣವಿ ದೇವಿಯನ್ನೇ ವಾಸಂತಿಕಾ ದೇವಿ ಎಂದು ಕರೆಯಲ್ಪಡುತ್ತಿದೆ. ಇಲ್ಲಿರುವ ಈ ಎಲ್ಲಾ ಮೂರ್ತಿಗಳು ಹುತ್ತದ ಮಣ್ಣಿನಿಂದ ಮಾಡಲ್ಪಟ್ಟಿರುವ ವಿಶೇಷ ವಿಗ್ರಹಗಳಾಗಿದ್ದು ಆಗಾಗ ಇವುಗಳಿಗೆ ಬಣ್ಣವನ್ನು ಬಳಿಯಲಾಗುತ್ತಿದೆಯಷ್ಟೇ. ಎಂದರೆ ಅವುಗಳ ರಚನಾ ತಂತ್ರಗಾರಿಕೆಯು ಅಚ್ಚರಿ ಮತ್ತು ಬೆರಗನ್ನುಂಟ ುಮಾಡುತ್ತದೆ. ಹೊಯ್ಸಳರಿಗೂ ಮೊದಲಿನ ಇಂತಹ ಈ ದೇವಿಯರ ಮೂರ್ತಶಿಲ್ಪ ನಮ್ಮ ಗ್ರಾಮ ಚರಿತ್ರಾಕೋಶದಲ್ಲೇ ಒಂದು ಹೃದಯಂಗಮವಾದ ಸಂಗತಿಯಲ್ಲದೆ, ಇನ್ನೇನು?

ಉಜಿರೆಯ ಎಸ್‌ಡಿಎಂ ಕಾಲೇಜಿನ ಇತಿಹಾಸ ವಿಭಾಗದವರು ತಮ್ಮ ವಿದ್ಯಾರ್ಥಿಗಳೊಂದಿಗೆ ಇಲ್ಲಿ ಕ್ಷೇತ್ರಾಧ್ಯಯನವನ್ನು ಮಾಡಿದ್ದು 'ಹೊಯ್ಸಳ ರಾಜವಂಶದ ಉಗಮಸ್ಥಾನ ಶಶಕಪುರ: ಒಂದು ಅಧ್ಯಯನ' ಎಂಬ ಕಿರು ಕೃತಿಯನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಅವರು "ಶಶಕಪುರ ಮತ್ತು ಅದರ ದೇವಾಲಯಗಳು ಹೊಯ್ಸಳರ ಆಳ್ವಿಕೆಗೆ ಮುಂಚೆಯೇ ಅಸ್ತಿತ್ವದಲ್ಲಿದ್ದವು ಎಂಬ ಅಂಶವನ್ನು ಅದರ ಶಾಸನಗಳು ಸೂಚಿಸುತ್ತವೆ" ಎಂದು ತಿಳಿಸುತ್ತಾರೆ. ಅದರಂತೆ ಈಗ ಗಮನಿಸಿಕೊಂಡಂತೆ ಅಂಗಡಿ ಗ್ರಾಮದ ವಾಸಂತಿಕ ದೇವಾಲಯ, ಎರಡು ಕಲ್ಲಿನ ಕಂಬಗಳು, ನೇಮಿನಾಥ, ಶಾಂತಿನಾಥ ಬಸದಿಗಳು, ಮಕರ ಜೀನಾಲಯ, ವೈಷ್ಣವ ಪಂಥದ ಕೇಶವ ದೇವಾಲಯ, ಶೈವ ಪಂಥದ ಪಾತಾಳ ರುದ್ರೇಶ್ವರ ದೇವಾಲಯ, ಮಲ್ಲೇಶ್ವರ, ಮಲ್ಲಿಕಾರ್ಜುನ ದೇವಾಲಯಗಳು

ಈ ಪ್ರದೇಶದ ಸಾಂಸ್ಕೃತಿಕ ಇತಿಹಾಸದ ಮೆರಗನ್ನು ಹೆಚ್ಚಿಸಿವೆ. ಕೇಶವ ದೇವಾಲಯದ ಮೂರ್ತಿಯನ್ನು ಹೊಯ್ಸಳ ಶೈಲಿಯ ಶಿಲ್ಪಕ್ಕೆ ಒಂದು ಅತ್ಯುತ್ತಮ ಮಾದರಿ ಎಂದು ಗುರುತಿಸಲಾಗಿದೆ. ಎಫಿಗ್ರಾಫಿಯಾ ಆಫ್ ಕರ್ನಾಟಕ ಸಂಪುಟದಲ್ಲಿ ಉಲ್ಲೇಖವಾಗಿರುವ ಬೆಳವಾಡಿ ಶಾಸನ ಹಾಗೂ 10 ನೆಯ ಶತಮಾನದ ಕೆಲವು ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಇಲ್ಲಿನ ಐತಿಹಾಸಿಕ ವಿಚಾರಗಳನ್ನು ಕುರಿತಂತೆ ಇತಿಹಾಸಕಾರರು ಬೆಳಕು ಚೆಲ್ಲುವ ಪ್ರಯತ್ನ ಮಾಡಿರುವುದು ತಿಳಿಯುತ್ತದೆ. ಈ ದಿಸೆಯಲ್ಲಿ ನೋಡಿದಾಗ ಒಂದಾನೊಂದು ಕಾಲದಲ್ಲಿ ದಟ್ಟವಾದ ಕಾಡುಮೇಡುಗಳಿಂದ ಕೂಡಿದ ಪ್ರದೇಶವಾಗಿದ್ದ ಇಲ್ಲಿ ಜೈನ ಮುನಿಗಳು ವಾಸವಾಗಿದ್ದರೆಂಬ ವಿವರಗಳು ಓದಿಗೆ ಸಿಗುತ್ತವೆ. ಅಂತೆಯೇ ಚಾಳುಕ್ಯರ ನಾಡಿನಿಂದ ಮಲ್ಲಚಂದ್ರದೇವನೆಂಬವನು ಇಲ್ಲಿಗೆ ಬಂದಿದ್ದನೆಂಬಂತಹ ವಿಚಾರಗಳು ಅಮೋಘವೆನಿಸುತ್ತದೆ. ಜಾನಪದೀಯವಾಗಿಯೂ ಗಮನ ಸೆಳೆದಿರುವ ಇಲ್ಲಿನ ಪ್ರದೇಶಗಳಲ್ಲಿ ಉತ್ಸವಮೂರ್ತಿಗಳ ಮೂಲಕ ನಾಡಿನ ಹಿರಿಮೆ ಗರಿಮೆಯನ್ನು ಕಟ್ಟಿಕೊಡುವ ಸುಗ್ಗಿ ಉತ್ಸವ ಜಾತ್ರೆಗಳು ಹಲವು ತಲೆಮಾರುಗಳಿಂದಲೂ ನಡೆದುಕೊಂಡು ಬರುತ್ತಿವೆ. ಮೂಡಿಗೆರೆ ತಾಲ್ಲೂಕಿನ ಕೋಳೂರು ಸಾವಿರದ ಸುಗ್ಗಿ ಉತ್ಸವದಲ್ಲಿ ಮೌಖಿಕ ಪರಂಪರೆಯ ಧ್ವನಿಚಿತ್ರವಾಗಿ ತಲಾತಲಾಂತರದಿಂದ ಮೂಡಿಬಂದು ಈಗಲೂ ಮುಂದುವರಿದುಕೊಂಡು ಹೇಳಲ್ಪಡುತ್ತಿರುವ 'ಹಳೇ ಹೊಯ್ಸಳರಾಯನ ಕಾಲದಿಂದ ನಾಡು ಮೇಲೆ ನಾಡಾಗಿ, ಬೀಡು ಮೇಲೆ ಬೀಡಾಗಿ..' ಎಂಬ ಸಾಸುವಕ್ಕಿ ಶ್ಲೋಕವು ಹೊಯ್ಸಳರ ಗತಿಸ್ಥಿತಿಯ ಹೃದಯಚಿತ್ರದಂತೆ ಭಾಸವಾಗುತ್ತದೆ.

ಹೀಗೆ ಸರಿಸುಮಾರು ಕ್ರಿ.ಶ. 11ನೇ ಶತಮಾನದಿಂದ ಮೊದಲುಗೊಂಡು 14ನೇ ಶತಮಾನದವರೆಗೆ ಆಳ್ವಿಕೆ ನಡೆಸಿರುವ ಹೊಯ್ಸಳರು ದಕ್ಷಿಣ ಭಾರತದ ಚರಿತ್ರೆಯಲ್ಲಿ ಒಂದು ಅನನ್ಯ ಅಸ್ಮಿತೆಯನ್ನು ಹೊಂದಿದವರಾಗಿದ್ದಾರೆ. 'ಕರ್ನಾಟಕ ಪ್ರೌಢ ಇತಿಹಾಸ' ಕೃತಿಯಲ್ಲಿ ವಿವರಿಸಿರುವಂತೆ "ಸಳ ಹೊಯ್ಸಳ ವಂಶದ ಸ್ಥಾಪಕ. ಈತನ ಪೂರ್ವಿಕರ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಹೊಯ್ಸಳ ವಂಶದ ಕೆಲವು ಶಾಸನಗಳು ಇವರನ್ನು ಯಾದವರು ಹಾಗೂ ದ್ವಾರಕೆಗೆ ಸೇರಿದವರೆಂದು ವರ್ಣಿಸಿವೆ. ಆದರೆ ಬಹುತೇಕ ಶಾಸನಗಳು ಇವರನ್ನು ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಶಶಕಪುರ ಅಥವಾ ಸೊಸೆವೂರು ನಿವಾಸಿಗಳೆಂದು ತಿಳಿಸುತ್ತವೆ. ಸಳ ಸೊಸೆವೂರಿನ ವಾಸಂತಿಕಾ ದೇವಾಲಯದ ಮುಖ್ಯಸ್ಥನಾಗಿದ್ದ. ಜೈನ ಧರ್ಮದ ಆಚಾರ್ಯ ಸುದತ್ತಚಾರ್ಯ ಎಂಬ ಮುನಿಯ ಮಾರ್ಗದರ್ಶನದಲ್ಲಿ ರಾಜ್ಯ ಸ್ಥಾಪಿಸಿದನೆಂದು ಶಾಸನಗಳು ಮತ್ತು ಇನ್ನಿತರ ದಾಖಲೆಗಳು ದೃಢಪಡಿಸುತ್ತವೆ. ಹುಲಿಯೊಂದು ದೇವಾಲಯಕ್ಕೆ ಪ್ರವೇಶಿದಾಗ ಸುದತ್ತಚಾರ್ಯ ಪೊಯ್-ಸಳ(ಹೊಡೆ ಸಳ) ಎಂದು ಆದೇಶಿಸಿದನೆಂದೂ, ಧೈರ್ಯವಂತನಾಗಿದ್ದ ಸಳ ಹುಲಿಯನ್ನು ಹೊಡೆದು ಕೊಂದನೆಂಬುವುದು ದಂತ ಕತೆ. ಇದರಿಂದ ಸಳ ಹುಲಿಯನ್ನು ಕೊಲ್ಲುತ್ತಿರುವ ದೃಶ್ಯವೇ ರಾಜ್ಯ ಲಾಂಛನವಾಯಿತು. ಹೊಯ್ಸಳರು ಮೂಲತಃ ಗುಡ್ಡಗಾಡು ಜನಾಂಗದವರು. ಚೋಳರ ಅಧೀನದಲ್ಲಿದ್ದ ಕನ್ನಡದ ಪ್ರದೇಶಗಳನ್ನು ಆಕ್ರಮಿಸಿಕೊಂಡು ಹೊಯ್ಸಳರು ಏಳಿಗೆ ಹೊಂದಿದರು. ಚೋಳರ ಮೇಲೆ ಅವರು ಗಳಿಸಿರುವ ವಿಜಯ ಅವರ ಲಾಂಛನಕ್ಕೆ ಅರ್ಥ ಸೂಚಿಸುತ್ತದೆ. ಏಕೆಂದರೆ ಚೋಳರ ಲಾಂಛನ ಹುಲಿ. ಹುಲಿಯನ್ನು ಕೊಲ್ಲುತ್ತಿರುವ ದೃಶ್ಯ ಚೋಳರ ಮೇಲೆ ಹೊಯ್ಸಳರು ಗಳಿಸಿದ ವಿಜಯವನ್ನು ಸೂಚಿಸುತ್ತದೆ" (ಕರ್ನಾಟಕ ಪ್ರೌಢ ಇತಿಹಾಸ, ಪುಟ: 62) ಎಂಬುವುದು.

ಮುಂದುವರೆದು-"ಸಳನ ನಂತರ ನೃಪಕಾಮ ಹೊಯ್ಸಳ ಪ್ರದೇಶಗಳಿಗೆ ರಾಜನಾದನು. ಇವರಿಬ್ಬರು ಶಶಕಪುರದಲ್ಲಿ ಆಳ್ವಿಕೆ ನಡೆಸಿದರು. ಇವರ ನಂತರ ಅಧಿಕಾರಕ್ಕೆ ಬಂದ ವಿನಯಾದಿತ್ಯ ಪ್ರಾರಂಭಿಕ ದೊರೆಗಳಲ್ಲಿ ಪ್ರಬಲನಾದವನು. ಈತ ಕಲ್ಯಾಣಿ ಚಾಲುಕ್ಯರ ಸಾಮಂತನಾಗಿದ್ದು ತನ್ನ ಸಹೋದರಿ ಹೊಯ್ಸಳ ದೇವಿಯನ್ನು ಕಲ್ಯಾಣಿ ಚಾಲುಕ್ಯ ದೊರೆ ಒಂದನೇ ಸೋಮೇಶ್ವರನಿಗೆ ವಿವಾಹ ಮಾಡಿಕೊಡುವ ಮೂಲಕ ವೈವಾಹಿಕ ಬಾಂಧವ್ಯ ಬೆಳೆಸಿದನು. ಇದ-ರಿಂದ ಹೊಯ್ಸಳರ ಗೌರವ ಪ್ರತಿಷ್ಠೆಗಳು ಹೆಚ್ಚಾದವು. ಮಲೆಪರೋಳ್ಗಂಡ ಎಂಬುದು ಪ್ರಾರಂಭಿಕ ಹೊಯ್ಸಳ ದೊರೆಗಳಿಗಿದ್ದ ಬಿರುದು. ವಿನಯಾದಿತ್ಯನ ನಂತರ ಆತನ ಮಗ ಎರೆಯಂಗ (ಕ್ರಿ.ಶ.1098-1102) ಚಾಲುಕ್ಯರ ದಿಗ್ವಿಜಯಗಳಲ್ಲಿ ಪ್ರಮುಖ ಪಾತ್ರ ವಹಿಸಿದನು. ಇವನಿಗೆ 1ನೇ ಬಲ್ಲಾಳ, ಬಿಟ್ಟಿದೇವ (ವಿಷ್ಣುವರ್ಧನ), ಉದಯಾದಿತ್ಯ ಎಂಬ ಮಕ್ಕಳಿದ್ದರು. ಒಂದನೇ ಬಲ್ಲಾಳ ಕ್ರಿ.ಶ.1102 ರಿಂದ 1108ರ ವರೆಗೆ ಆಳ್ವಿಕೆ ನಡೆಸಿದ ಮೇಲೆ ಬಿಟ್ಟಿದೇವ(ವಿಷ್ಣುವರ್ಧನ) ಅಧಿಕಾರಕ್ಕೆ ಬಂದನು" (ಕರ್ನಾಟಕ ಪ್ರೌಢ ಇತಿಹಾಸ, ಪುಟ: 63). ಈ ವಿಷ್ಣುವರ್ಧನ ಹೊಯ್ಸಳ ರಾಜರಲ್ಲೇ ಪ್ರಮುಖನಾದವನಾಗಿದ್ದಾನೆ. ಇವನ ಆಳ್ವಿಕೆಯಲ್ಲಿ ದಿಗ್ವಿ-ಜಯಗಳಿಂದ ಹೊಯ್ಸಳ ಸಾಮ್ರಾಜ್ಯ ಉನ್ನತ ಸ್ಥಾನವನ್ನು ಹೊಂದಿದ್ದಿತು. ಇವನು ತಲಕಾಡನ್ನು ಚೋಳರಿಂದ ಗೆದ್ದು 'ತಲಗಾಡು ಗೊಂಡ' ಎಂಬ ಬಿರುದನ್ನು ಗಳಿಸಿದ್ದಲ್ಲದೆ, ಅಲ್ಲೇ ಒಂದು ದೇವಾಲಯ ಕಟ್ಟಿಸಿದನು. ಜೊತೆಗೆ ಚೋಳರ ಆಳ್ವಿಕೆಯ ಕೋಲಾರ, ನಿಡಗಲ್ಲನ್ನು ತನ್ನ ಸುಪರ್ದಿಗೆ ಪಡೆದನು. ಕೊಡಗು ಹಾಗೂ ಹಾಸನದಲ್ಲಿದ್ದ ಚೆಂಗಾಳ್ವರನ್ನೂ ಸೋಲಿಸಿದನು. ಚಿತ್ರದುರ್ಗದಲ್ಲಿದ್ದ ಪಾಂಡ್ಯರ ವಿರುದ್ಧ ಕೂಡ ವಿಜಯವನ್ನು ಸಾಧಿಸಿದನು. ಅದೇ ರೀತಿ ಕಲ್ಯಾಣಿ ಚಾಲುಕ್ಯರನ್ನು ಕಣ್ಣಾಗಾಲ ಕದನದಲ್ಲಿ ಎದುರಿಸಿ ಗೆದ್ದನು. ನಂತರ ಇವರಿಂದ ಹಲಸೂರು ಹಾಗೂ ಹೊಸಬೀಡು ಕದನಗಳಲ್ಲಿ ಸೋಲಾದರೂ ಕಲ್ಯಾಣಿ ಚಾಲುಕ್ಯರ ದೊರೆ ಆರನೇ ವಿಕ್ರಮಾದಿತ್ಯ ಮರಣ ಹೊಂದಿದ ಕ್ರಿ.ಶ. 1126ರ ನಂತರದಲ್ಲಿ ಬಂಕಾಪುರದವರೆಗೂ ತನ್ನ ರಾಜ್ಯವನ್ನು ವಿಸ್ತರಿಸಿದ್ದಲ್ಲದೆ ದ್ವಾರ ಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಉತ್ತಮ ಆಳ್ವಿಕೆಯಿಂದ ಹೆಸರುವಾಸಿಯಾದನು. ಪರಧರ್ಮ ಸಹಿಷ್ಣು ಕೂಡ ಆಗಿದ್ದ ವಿಷ್ಣುವರ್ಧನ ತಮಿಳುನಾಡಿನಿಂದ ಇಲ್ಲಿಗೆ ಬಂದಿದ್ದ ರಾಮಾನುಜಚಾರ್ಯರಿಗೆ ಆಶ್ರಯ ನೀಡುವುದರೊಂದಿಗೆ ಅವರ ಪ್ರಭಾವದಿಂದ ವೈಷ್ಣವ ಮತಾವಲಂಬಿಯಾದನು. ಜೊತೆಗೆ ಈತನ ಪತ್ನಿ ನಾಟ್ಯರಾಣಿ ಶಾಂತಲೆ ಜೈನಮತಸ್ಥೆಯಾಗಿದ್ದು ಸಂಗೀತ, ನೃತ್ಯ, ಲಲಿತಕಲೆಗಳ ಮೂಲಕ ವಿಷ್ಣು (ವಿಷ್ಣುವರ್ಧನನ)ಪ್ರೀತಿಗೆ ಪಾತ್ರಳಾಗಿದ್ದಳು. ಈ ನಿಟ್ಟಿನಿಂದ ಗಮನಿಸಿಕೊಂಡಾಗ ತಲಕಾಡು, ಬೇಲೂರು, ಮೇಲುಕೋಟೆಗಳಲ್ಲಿ ವಿಶಿಷ್ಟ ಕಲೆಯ ದೇವಾಲಯಗಳನ್ನು ವಿಶೇಷ ಶೈಲಿಯಿಂದ ನಿರ್ಮಾಣ ಮಾಡಿಸಿದ್ದು ವಿಷ್ಣುವರ್ಧನನ ಕಲಾಪ್ರಿಯತೆಗೆ ಉತ್ತಮ ನಿದರ್ಶನವೂ ಆಗಿದೆ.

ವಿಷ್ಣುವರ್ಧನನ ತರುವಾಯ ಈತನ ಮಗ ಮೊದಲನೆಯ ನರಸಿಂಹ ಅಧಿಕಾರಕ್ಕೆ ಬಂದರೂ ತನ್ನ ತಂದೆಯಂತೆ ಮಹತ್ವಕಾಂಕ್ಷೆಗಳಿಲ್ಲದೆ ಇದ್ದುದ-ರಿಂದ ಇವನ ನಂತರ ಅಧಿಕಾರಕ್ಕೆ ಬಂದ ಇಮ್ಮಡಿ ಬಲ್ಲಾಳನ ವರೆಗೆ ಆವೊಂದು ಉತ್ಸುಕತೆಯನ್ನು ಹೊಯ್ಸಳ ಸಾಮ್ರಾಜ್ಯ ಕಾಯ್ದುಕೊಳ್ಳಬೇಕಾಯಿತು. ತದನಂತರ ಬಂದಂತಹ ಇಮ್ಮಡಿ ಬಲ್ಲಾಳನು ಸೇವುಣ ದೊರೆ ದೇವಗಿರಿಯ ಐದನೆ ಬಿಲ್ಲಮನನ್ನು ಸೋಲಿಸಿದ್ದರಿಂದ ಕೃಷ್ಣಾನದಿಯವರೆಗೂ ಇವನ ಸಾಮ್ರಾಜ್ಯ ವಿಸ್ತರಣೆಯಾಯಿತು. ಯುವರಾಜನಾದ ಇಮ್ಮಡಿ ನರಸಿಂಹನನ್ನು ಪಾಂಡ್ಯರ ವಿರುದ್ಧದ ಚೋಳರ ಸಹಾಯಕ್ಕೆಂದು ಕಳುಹಿಸಿದ್ದರಿಂದ 'ಚೋಳ ರಾಜ್ಯ ಪುನರ್ ಪ್ರತಿಷ್ಠಾಪನಾಚಾರ್ಯ' ಎಂಬ ಬಿರುದನ್ನು ಇಮ್ಮಡಿ ಬಲ್ಲಾಳ ಹೊಂದಿದ್ದಲ್ಲದೆ, ಜೊತೆಗೆ ಕಣ್ಣಾನೂರನ್ನು ಹೊಯ್ಸಳರಿಗೆ ಚೋಳರು ಬಿಟ್ಟುಕೊಟ್ಟದ್ದೂ ಈಗ ಇತಿಹಾಸ. ಶ್ರವಣಬೆಳಗೊಳದ ಅಕ್ಕನ ಬಸದಿ, ಅರಸೀಕೆರೆಯ ಸಹಸ್ರಕೂಟ, ಅಮೃತಾಪುರದ ಅಮೃತೇಶ್ವರ ದೇವಾಲಯಗಳು ಇವನ ಕಾಲಘಟ್ಟದ ಪ್ರಮುಖ ರಚನೆಗಳಾದವು. ಇಮ್ಮಡಿ ಬಲ್ಲಾಳನ ನಂತರ ಕ್ರಮವಾಗಿ ಇಮ್ಮಡಿ ನರಸಿಂಹ ಹಾಗೂ ಇವನ ಮಗನಾದ ಸೋಮೇಶ್ವರ ಅಧಿಕಾರಕ್ಕೆ ಬಂದರು. ಆದರೆ ಇವರ ಕಾಲದಲ್ಲಿ ಪ್ರಮುಖವಾಗಿ ಸೇವುಣರ ದಾಳಿಗೆ ಹೊಯ್ಸಳ ಸಾಮ್ರಾಜ್ಯ ತುತ್ತಾಯಿತು. ದೊರೆ ಸೋಮೇಶ್ವರನು ತನ್ನ ಮಕ್ಕಳಾದ ಮುಮ್ಮಡಿ ನರಸಿಂಹ ಮತ್ತು ರಾಮನಾಥರಿಬ್ಬರಿಗೆ ರಾಜ್ಯವನ್ನು ವಿಭಾಗ ಮಾಡಿ ರಾಮನಾಥನಿಗೆ ತಮಿಳು ಪ್ರಾಂತ್ಯ ಕಣ್ಣನೂರು ಹಾಗೇ ಮುಮ್ಮಡಿ ನರಸಿಂಹನಿಗೆ ದ್ವಾರಸಮುದ್ರದ ಆಡಳಿತವನ್ನು ವಹಿಸಿದನು. ಈ ನಡುವೆ ಪಾಂಡ್ಯರು ಕಣ್ಣಾನೂರನ್ನು ವಶಪಡಿಸಿಕೊಂಡ ಪರಿಣಾಮ ಬರಿದಂತಾದ ರಾಮನಾಥನು ದ್ವಾರಸಮುದ್ರದ ತನ್ನವರೊಂದಿಗೇ ಕಲಹಕ್ಕೆ ಬಿದ್ದು ಹೊಯ್ಸಳ ಸಾಮ್ರಾಜ್ಯವು ದೌರ್ಬಲ್ಯಕ್ಕೊಳಗಾಗಲು ಕಾರಣನಂತಾದನು.

ನಂತರದಲ್ಲಿ ಹೊಯ್ಸಳ ಸಾಮ್ರಾಜ್ಯವು ಅಲ್ಪಸ್ವಲ್ಪ ಚೇತರಿಕೆ ಕಂಡದ್ದು ಮೂರನೆ ಬಲ್ಲಾಳನ ಕಾಲದಲ್ಲಿ. ಇವನು ಮುಮ್ಮಡಿ ನರಸಿಂಹನ ಮಗ. ಆದರೆ ಈತನು ಹೊಯ್ಸಳರ ಪ್ರಾಬಲ್ಯವನ್ನು ಮರುಸ್ಥಾಪಿಸುವ ಹೊತ್ತಿಗಾಗಲೇ ಅಲ್ಲಾವುದ್ದೀನ ಖಿಲ್ಜಿಯ ಸೇನಾನಿ ಮಲ್ಲಿಕಾಫರನು ಕ್ರಿ.ಶ.1310ರ ಸುಮಾರಿಗೆ ದಕ್ಷಿಣ ಭಾರತದ ಮೇಲೆ ಮೊದಲ ದಿಗ್ವಿಜಯ ಯಾತ್ರೆ ಕೈಗೊಂಡದ್ದು ಚರಿತ್ರೆಯ ಪುಟಗಳಲ್ಲಿ ಮಹತ್ವಪೂರ್ಣವಾಗಿ ಗಮನಿಸಬಹುದಾದ ವಿಷಯವಾಗಿದೆ. ಈ ಸಂದರ್ಭದಲ್ಲಿ ತನ್ನ ರಾಜ್ಯವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಮಧುರೈನಲ್ಲಿದ್ದ ಆತನೊಂದಿಗೆ ಶಾಂತಿ ಒಪ್ಪಂದಮಾಡಿಕೊಳ್ಳುವ ಅನಿವಾರ್ಯತೆ ಈತನದ್ದಾಯಿತು. ನಂತರದಲ್ಲಿ ಮಹಮದ್ ಬಿನ್ ತೊಘಲಕ್‌ನ ದಾಳಿಯ ಕಾಲದಲ್ಲೂ ಇಂತದ್ದೇ ಪರಿಸ್ಥಿತಿಯನ್ನು ನಮ್ಮ ಹೊಯ್ಸಳ ಬಲ್ಲಾಳ ಎದುರಿಸಬೇಕಾಯಿತು. ಆದ-

'ರೂ ಮುಂದೆ ಸ್ವಾಭಿಮಾನಿಯಾದ ಕೆಚ್ಚದೆಯ ಬಲ್ಲಾಳನು ಅಂಜದೆ ಕ್ರಿ.ಶ.1342 ರ ಹೊತ್ತಿನಲ್ಲಿ ಮಧುರೆಯಲ್ಲಿ ಹೋರಾಟ ಮಾಡಿ ವೀರ ಮರಣವನ್ನಪ್ಪಿದನು. ಇವನ ತರುವಾಯ ವಿರೂಪಾಕ್ಷ (ನಾಲ್ಕನೆಯ ಬಲ್ಲಾಳ) ಆಡಳಿತ ಮಾಡಲು ಯೋಜಿತನಾದರೂ ಅದು ಅಷ್ಟರ ಮಟ್ಟಿಗೆ ಕಾರ್ಯಸಾಧುವಾಗಲಿಲ್ಲ. ಇಂತಹ ಸಂದರ್ಭದಲ್ಲೇ ಕನ್ನಡಿಗರ ಮತ್ತೊಂದು ಆಯಾಮದ ಸ್ವಾಭಿಮಾನತೆಯ ಪ್ರತೀಕವಾಗಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಕಂಡು ಹೊಯ್ಸಳ ಸಾಮಾಜ್ಯವು ಚರಿತ್ರೆಯ ಪುಟಗಳಲ್ಲಿ ಚರಿತ್ರಾರ್ಹವಾಗಿ ಅಚ್ಚೊತ್ತಲ್ಪಟ್ಟು ಇತಿಹಾಸವಾಯಿತು.

**ಹೊಯ್ಸಳ ಅರಸರ ವಂಶಾವಳಿ**

ಸಳ
ನೃಪಕಾಮ (ಕ್ರಿ.ಶ.1000–1045)
↓
ವಿನಯಾದಿತ್ಯ (ಕ್ರಿ.ಶ.1045–1098)
↓
ಎರೆಯಂಗ (ಕ್ರಿ.ಶ.1098 –1100)
↓

ಮೊದಲನೆಯ ಬಲ್ಲಾಳ (ಕ್ರಿ.ಶ.1100–1108) | ವಿಷ್ಣುವರ್ಧನ (ಕ್ರಿ.ಶ. 1108–1142) | ಉದಯಾದಿತ್ಯ

ವಿಷ್ಣುವರ್ಧನ ↓

ಬಲ್ಲಾಳದೇವ | ಮೊದಲನೆಯ ನರಸಿಂಹ (ಕ್ರಿ.ಶ.1142 – 1173)

ಮೊದಲನೆಯ ನರಸಿಂಹ
↓
ಇಮ್ಮಡಿ ಬಲ್ಲಾಳ (ಕ್ರಿ.ಶ.1173 – 1220)
↓
ಇಮ್ಮಡಿ ನರಸಿಂಹ (ಕ್ರಿ.ಶ.1220–1235)
↓
ಸೋಮೇಶ್ವರ (ಕ್ರಿ.ಶ.1235–1253)
↓

ಮುಮ್ಮಡಿ ನರಸಿಂಹ (ಕ್ರಿ.ಶ.1253–1292) | ರಾಮನಾಥ (ಕ್ರಿ.ಶ.1253–1295)

ಮುಮ್ಮಡಿ ನರಸಿಂಹ
↓
ಮುಮ್ಮಡಿ ಬಲ್ಲಾಳ (ಕ್ರಿ.ಶ.1292–1342)
↓
ವಿರೂಪಾಕ್ಷ(ನಾಲ್ಕನೆಯ ಬಲ್ಲಾಳ) (ಕ್ರಿ.ಶ.1343–1346)

ರಾಮನಾಥ
↓
ವಿಶ್ವನಾಥ (1295–1297)

ಈ ಮೇಲಿನಂತೆ ನಕ್ಷಾತ್ಮಕವಾಗಿ ಹೊಯ್ಸಳರ ವಂಶಾವಳಿಯನ್ನು ಗುರುತಿಸಿರುವುದನ್ನು 'ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ' ಕೃತಿಯಿಂದ ಇಲ್ಲಿ ಪಡೆದುಕೊಳ್ಳಲಾಗಿದೆ. ಇದರಿಂದ ಹೊಯ್ಸಳ ರಾಜಮನೆತದ ವಿವಿಧ ಕಾಲಘಟ್ಟದ ರಾಜರಾಳ್ವಿಕೆಯನ್ನು ಕಾಲಾನುಕ್ರಮಕ್ಕನುಗುಣವಾಗಿ ಸ್ಥೂಲ ಪರಿಚಯ ಮಾಡಿಕೊಳ್ಳಲು ನಮಗಿಲ್ಲಿ ಸಹಾಯಕವಾಗುತ್ತದೆ. ಈ ಬಗ್ಗೆ ಇತಿಹಾಸ ಚಿಂತಕ ಹಾಗೂ ಅಧ್ಯಾಪಕ ಆರ್. ವಿನೋದ್ ಪ್ರಕಾಶ್ ಅವರನ್ನು ಮಾತನಾಡಿಸಿದಾಗ ಅವರು –"ಮಲೆನಾಡಿನ ಭಾಗದಲ್ಲಿ ಒಂದು ಸಾಮ್ರಾಜ್ಯವನ್ನು ಕಟ್ಟಿಬೆಳೆಸಿದ ಏಕೈಕ ರಾಜಮನೆತನವಾಗಿ ಹೊಯ್ಸಳರು ನಮಗೆ ಪ್ರಮುಖರಾಗುತ್ತಾರೆ. ಮಲೆನಾಡಿನಲ್ಲಿ ಬಯಲು ನಾಡಿನಂತೆಯೇ ಏಕೆ ಇಂತಹ ಸಾಮ್ರಾಜ್ಯಗಳು ಇಲ್ಲೇ ಹುಟ್ಟಿ ಬೆಳೆಯಲಿಲ್ಲ ಎಂದುಕೊಂಡಾಗ ಇದು ಗುಡ್ಡಗಾಡು ಪ್ರದೇಶ. ಜನವಸತಿ ಬಹಳ ಕಡಿಮೆ. ಅಲ್ಲೊಂದು ಇಲ್ಲೊಂದು ಎಂಬಂತೆ ಮನೆಗಳು. ಹೀಗಾಗಿ ಒಂದು ಬಹೃತ್ ರಾಜಮನೆತನ ರೂಪು ತಳೆದು ಬೆಳೆಯ ಬೇಕೆಂದರೆ ಅದಕ್ಕೆ ಆ ಪ್ರದೇಶದಲ್ಲಿ ಜನ ಸಮೂಹ ಅತ್ಯಂತ ಅಗತ್ಯವಾಗಿ ಬೇಕಿರುತ್ತದೆ. ಆದ್ದರಿಂದಲೋ ಏನೋ; ಹೊಯ್ಸಳರು ಪ್ರಾರಂಭದಲ್ಲಿ ಸೊಸೆವೂರನ್ನು ರಾಜಧಾನಿಯನ್ನಾಗಿ

ಮಾಡಿಕೊಂಡರೂ ತದನಂತರದಲ್ಲಿ ಬೇಲೂರಿಗೆ, ಆನಂತರ ದ್ವಾರಸಮುದ್ರ ಹಾಗೂ ತಮಿಳುನಾಡಿನ ಕಣ್ಣಾನೂರನ್ನು ತಮ್ಮ ರಾಜಧಾನಿ ಅಥವಾ ಆಡಳಿತ ಕೇಂದ್ರವನ್ನಾಗಿ ಬದಲಾಯಿಸುತ್ತ ಹೋದರು" ಎಂದು ಅಭಿಪ್ರಾಯಪಡುತ್ತಾರೆ.

ಇಂತಹ ವೈಶಿಷ್ಟತೆಯ ನಡುವೆ ಜೈನ ಮತದಂತಹ ಒಂದು ಅಹಿಂಸಾ ಧರ್ಮವನ್ನು ಪರಿಪಾಲಿಸುವ ಸುದತ್ತಾಚಾರ್ಯರೆಂಬ ಗುರುಗಳು ಸಳನೆಂಬ ಯುವಕನಿಗೆ ಹೊಯ್'ಸಳ ಎಂದು ಹೇಗೆ ಹೇಳಿರಲು ಸಾಧ್ಯ ಎಂಬ ಕುತೂಹಲವೂ ಹುಟ್ಟಿಕೊಳ್ಳುತ್ತದೆ. ಆದರೆ ನಾವು ಪಲ್ಲವರಿಂದ ಅವಮಾನಿತನಾದ ಕದಂಬ ರಾಜಮನೆತದ ಸಂಸ್ಥಾಪಕ ಮಯೂರ ಶರ್ಮನು ತನ್ನ ಜುಟ್ಟು ಹಾಗೂ ಜನಿವಾರವನ್ನು ಬಿಸುಟು ಖಡ್ಗ ಹಿಡಿದು ಕ್ಷತ್ರಿಯನಾಗಿ ಒಂದು ಕನ್ನಡ ನಾಡಿನ ಸ್ವಾಭಿಮಾನದ ಪ್ರತೀಕದಂತೆ ಮಯೂರ ವರ್ಮನೆಂಬ ಹೆಸರಿಂದ ಕಂಗೊಳಿಸಿರುವ ಇತಿಹಾಸವು ನಮ್ಮೆದುರಿಗಿರುವಾಗ ಇದೂ ಕೂಡ ಹಾಗೇ ಅನಿಸುತ್ತದೆ. ಎಂದರೆ ಜೀವನ ಧರ್ಮದಲ್ಲಿ ಶಾಂತಿ ಮತ್ತು ಪ್ರೀತಿ ಮೂಲತತ್ವವಾದರೂ ತಮ್ಮ ಅಸ್ತಿತ್ವ, ಜೀವ ರಕ್ಷಣೆ ಮತ್ತು ಅಳಿವು ಉಳಿವು ಎಂಬ ಪ್ರಶ್ನೆ ಒಡಮೂಡಿದಾಗ ಇಂತೊಂದು ಹೋರಾಟದ ಮಾರ್ಗವು ಆ ಕಾಲ ಸಂದರ್ಭದಲ್ಲಿ ಅನಿವಾರ್ಯವೂ ಆಗಿತ್ತು ಎಂದು ತೋರುತ್ತದೆ. ಹೊಯ್ಸಳ ರಾಜ ಲಾಂಛನವೂ ಹುಲಿಯೊಂದಿಗೆ ಹೋರಾಟ ಮಾಡುತ್ತಿರುವ ವೀರನ ಚಿತ್ರ ಎಂಬ ವಿವರ ಇತಿಹಾಸ ಪುಟಗಳ ವಿವರಣೆಯಲ್ಲಿದ್ದರೂ ಅದು ಈಗ ನಮಗೆ ಕಾಣುತ್ತಿರುವ ಕಲ್ಲಿನ ಕೆತ್ತನೆಯಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ ಸಿಂಹದಂತೆ ಕಾಣುತ್ತದೆ. ಇದು 'ಶಿಲ್ಪಿಯು ತನ್ನ ಪರಿಕಲ್ಪನೆಗೆ ತಂದುಕೊಂಡ ಹುಲಿ ಅಥವಾ ಪುಲಿ ಯಾವುದಿದ್ದಿರಾ ಬಹುದು?' ಎಂಬುವುದು ಇಲ್ಲಿ ಮುಖ್ಯವಾಗುತ್ತದೆ. ಆಗ 'ಪುಲಿ' ಎಂದರೆ ಒಂದು ಜಾತಿಯ ಸಣ್ಣಹುಲಿ. ಒಂದು ಜಾತಿಯ ಬೇಟೆ ನಾಯಿಗೂ ಪುಲಿ ಎನ್ನುತ್ತಾರೆಂಬ ವಿವರ ಪದಕೋಶದಲ್ಲಿ ಸಿಗುತ್ತದೆ. ಹೀಗಾಗಿ ನಾವೀಗ ಕಂಡುಕಾಣುತ್ತಿರುವ ಹುಲಿಯಂತೆ ಆಗಿನ ಸಂದರ್ಭದಲ್ಲಿ ಇಂತದೊಂದು ಹುಲಿ ಪ್ರಭೇದ ಇದ್ದಿರಲೂ ಬಹುದು. ಅಂದ ಹಾಗೆ ಪುಲಿ ಎಂದರೆ ಬೇಟೆ ನಾಯಿಗೂ ಹಾಗೇ ಹೇಳಿಕೊಂಡಿರುವುದರಿಂದ ಅಂತದೊಂದು ಪ್ರಾಣಿಯನ್ನು ಸಳನು ಹೊಯ್ದು ಹಾಕಿರುವ ಸಾಧ್ಯತೆಯೂ ಇದೆ. ಅದರಂತೆ ಹೊಯ್ಯೊದು ಎಂದರೆ ಹೊಡೆಯುವುದು. ಆದರೆ ನಮ್ಮ ಸಿನಿಮಾ ಗೀತೆಗಳಲ್ಲಿ ತೋರಿಸಿರುವಂತೆ ಚೂರಿ ಅಥವಾ ಕತ್ತಿಯಿಂದ ಇರಿದಿರುವುದಲ್ಲ. ಆದ್ದರಿಂದ ದೊಣ್ಣೆಯಿಂದ ಹೊಡೆದು ಅಥವಾ ಮುಷ್ಟಿಯಿಂದ ಗುದ್ದುವುದರ ಮೂಲಕ ಹೊಯ್ದು ಹಾಕಿದ್ದನೆಂದುಕೊಂಡರೆ ನಮ್ಮ ಈ ಹೊಯ್ಸಳನ ಬಗ್ಗೆ ಮತ್ತಷ್ಟೂ ಹೊಚ್ಚಹೊಸತಾಗಿ ಮೆಚ್ಚುಗೆಯ ನಗೆಯೊಂದು ಓದುಗನ ಮುಖದಲ್ಲಿ ಸಹಜವಾಗಿಯೇ ಮೂಡುತ್ತದೆ. ಆದರೆ ಹಾಗಂತೆ, ಹೀಗಂತೆ ಎಂದರೆ ನಮ್ಮ ಇತಿಹಾಸ ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವುದೂ ಇಲ್ಲ. ಮತ್ತೆ.. ಮತ್ತೆ.. ಅದು ಪರಿಶೋಧನೆ ಮಾಡುತ್ತಲೆ ಇರುತ್ತದೆ. ಅದರಂತೆ ಲಾಂಛನದಲ್ಲೂ ಚೂರಿ ಅಥವಾ ಕತ್ತಿಯನ್ನು ಹಿಡಿದಿರುವಂತೆಯೇ ಇದೆ. ಎಂದರೆ ಕಾಡಿನ ರಾಜ ಸಿಂಹದಂತಹ ಹುಲಿ(ಒಂದು ಪ್ರಾಣಿ)ಯನ್ನೇ ಎದುರಿಸಿ ಆಯುಧವನ್ನು ಹೊಂದಿ ಕ್ಷತ್ರಿಯ ಧರ್ಮದಂತೆ ಸಾಮ್ರಾಜ್ಯವನ್ನು ಕಟ್ಟಿ ಬೆಳೆಸಿದನು ಎಂಬುವುದನ್ನೂ ಈ ಲಾಂಛನ ಧ್ವನಿಸುತ್ತದೆ, ಕೂಡ. ಒಂದು ಕಾಲಘಟ್ಟದಲ್ಲಿ ಚಿತ್ರಗಳೂ ಅಕ್ಷರ ರೂಪದ ಶಾಸನಗಳಂತೆ ತಮ್ಮನ್ನು ತಾವು ಪ್ರತಿಬಿಂಬಿಸಿಕೊಳ್ಳುತ್ತಿದ್ದುದೂ ಇತಿಹಾಸದ ಸೊಗಸು ಎಂದರೆ ತಪ್ಪೆನಿಸದು.

ಅದರಂತೆ ಹೊಯ್ಸಳರು ಶಿಲ್ಪಕಲೆಗೆ ಕೊಟ್ಟ ಕೊಡುಗೆ ಅಪಾರವಾದುದು. ಹಳೇಬೀಡಿನಲ್ಲಿರುವ ಹೊಯ್ಸಳೇಶ್ವರ ದೇವಾಲಯವನ್ನು ಕಟ್ಟಲು 86, ಹಾಗೆಯೇ ಬೇಲೂರಿನ ಚನ್ನಕೇಶವ ದೇವಸ್ಥಾನ ನಿರ್ಮಿಸಲು 103 ವರ್ಷಗಳ ಕಾಲ ಬೇಕಾಯಿತೆಂದು ಓದುವಾಗ ಆಯಾಯ ಕಾಲಘಟ್ಟದ ಅರಸರು ಹಂತಹಂತವಾಗಿ ತಮ್ಮ ಹಿರಿಯರ ಹಾದಿಯನ್ನು ಕಲಾಪೂರ್ವಕವಾಗಿ ಮುಂದುವರಿಸಿರುವುದು ಹೃದಯಂಗಮ ಎನಿಸುತ್ತದೆ. ಇತ್ತ ಶೈವ ಹಾಗೂ ವೈಷ್ಣವ ಶೈಲಿ ಜೊತೆಗೆ ಆರ್ಯ ಮತ್ತು ದ್ರಾವಿಡ ಶೈಲಿಯ ಲಕ್ಷಣಗಳೆರಡನ್ನು ತಮ್ಮ ಕಲಾ ಜಗತ್ತಿಗೆ ಆಗು ಮಾಡಿಕೊಂಡಿರುವುದು ಅವರ ವಿಶಾಲ ದೃಷ್ಟಿಯ ಸೃಷ್ಟಿಯೇನೋ ಎಂಬಂತ ಭಾವವನ್ನು ಮೂಡಿಸುತ್ತದೆ. ಅದರಂತೆ ಬೇಲೂರಿನಲ್ಲಿರುವ ಅವರ 'ದರ್ಪಣ ಸುಂದರಿ'ಯು ತನ್ನನ್ನು ತಾನೇ ನೋಡಿಕೊಂಡು ಪುಳಕಿತಗೊಂಡಷ್ಟು ಎದೆಯಾಳದಲ್ಲಿ ಕವಿತೆಯೊಂದು ಮೂಡಿ ಮತ್ತೊಂದು ಸೃಜನಶೀಲ ಸಾಹಿತ್ಯ ಮಾಧ್ಯಮದತ್ತ ನಮ್ಮನ್ನು ಕರೆದೊಯ್ದು ಬಿಡುತ್ತದೆ. ಹೀಗೆ ಡಂಕಣ, ಜಕಣ, ದಾಸೋಜರೆಂಬ ಮುಂತಾದ ಶಿಲ್ಪಿಗಳ ಕೈಚಳಕದ ನೆಚ್ಚಿನ ಬೀಡಾಗಿ ಹೊಯ್ಸಳರ ಕಲೆ ಹಾಗೂ ವಾಸ್ತುಶಿಲ್ಪ ಮನಮೋಹಕವಾಗಿ ತೋರುತ್ತಿದೆ. "ಆದರೆ ಶಾಸನಗಳಲ್ಲಿ ಎಲ್ಲೂ ಡಂಕಣ, ಜಕಣರ ಉಲ್ಲೇಖ ಇರುವುದಿಲ್ಲ. ಅಲ್ಲಿ ಮಲ್ಲಿತಮ, ದಾಸೋಜ, ನಾಗೋಜ, ಮಬ ಎಂಬಂತಹ ಶಿಲ್ಪಿಗಳು ಕಂಡು ಬರುತ್ತಾರೆ" ಎಂದು ಇತಿಹಾಸ ಚಿಂತಕ ಆರ್.ವಿನೋದ ಪ್ರಕಾಶ ಹೀಗೆ ಮತ್ತೊಂದು ಚಿಂತನೆಯಿಂದ ಗಮನ ಸೆಳೆಯತ್ತಾರೆ. ಅದೇನೆ ಇರಲಿ ಕುವೆಂಪು ವಿರಚಿತ ನಮ್ಮ ನಾಡಿನ ಪ್ರೀತಿಯ ನಾಡಗೀತೆ 'ಜಯಭಾರತ ಜನನಿಯ ತನುಜಾತೆ'ಯಲ್ಲೂ ಇದೇ ಡಂಕಣ, ಜಕಣರು 'ಡಂಕಣ ಜಕಣರ ನೆಚ್ಚಿನ ಬೀಡೆ' ಎನ್ನುವಲ್ಲಿ ಗುಣಗಾನಕ್ಕೆ ಒಳಗಾಗಿದ್ದಾರೆಂದರೆ ಶಾಸನಗಳಲ್ಲಿ ಇಲ್ಲದಿದ್ದರೂ ಮೌಖಿಕ ಅಥವಾ ಜಾನಪದ ಪರಂಪರೆಯ ಹಿನ್ನೆಲೆಯೊಳಗೆ ಇದ್ದಾರೆಂದಾಯಿತು. ಜೊತೆಗೆ 'ಅಮರಶಿಲ್ಪಿ ಜಕಣಾಚಾರಿ' ಯಂತಹ ಸಿನಿಮಾಗಳೂ ಕೂಡ ಇದ್ದಾವಲ್ಲವೇ? ಎಂದರೆ ಶಾಸನಗಳಲ್ಲಿ ಹೆಸರಿಸಲ್ಪಟ್ಟ ಶಿಲ್ಪಿಗಳಲ್ಲೇ ಕೆಲವರಿಬ್ಬರ ಹೆಸರನ್ನು ಗ್ರಾಮೀಣರು ಡಂಕಣ, ಜಕಣ ಎಂದು ಬೇರೊಂದು ಅಡ್ಡ ಹೆಸರಿನಿಂದ ಕರೆಯುತ್ತಿದ್ದ ಸಾಧ್ಯತೆಗಳನ್ನೂ ನಾವು ಪರಿಭಾವಿಸಿಕೊಳ್ಳುವುದಕ್ಕೆ ಅವಕಾಶಗಳಿವೆ. ಅದರಂತೆ ಇನ್ನೋರ್ವ ಇತಿಹಾಸ ಅಧ್ಯಾಪಕ ತುಮಕೂರು ಡಾ.ಪ್ರಕಾಶ್ ಅವರು ಅಭಿಪ್ರಾಯ ಹೇಳುವಂತೆ ಗಮನಿಸುವುದಾದರೆ ಕೆಲವು ಶಿಲ್ಪಿಗಳು ತಮ್ಮ ಹೆಸರುಗಳನ್ನು ಎಲ್ಲೂ ಪ್ರಚುರಪಡಿಸದೆ ತಮ್ಮನ್ನು ತಾವು 'ಸ್ಥಪತಿ' ಎಂದಷ್ಟೇ ಉಲ್ಲೇಖಿಸುತ್ತಿದ್ದರೆಂದು. ಇಲ್ಲಿ ಸ್ಥಪತಿ ಎಂದರೆ ಕೆತ್ತುಗ, ಕೆತ್ತನೆಗಾರ, ಶಿಲ್ಪಿ, ವಿನ್ಯಾಸಗಾರ ಎಂದೆಲ್ಲಾ ಅರ್ಥ ಪದಕೋಶದಲ್ಲಿ ಸಿಗುತ್ತವೆ.

ಇದಕ್ಕೆ ಕಾರಣಗಳೂ ಅನೇಕ. ತಮ್ಮ ಹೆಸರು ಬೇಡ ಎಂಬ ಶಿಲ್ಪಿಗಳ ಎಲೆಮರೆಯಕಾಯಿಯ ವ್ಯಕ್ತಿತ್ವದ ಧೋರಣೆ ಒಂದಾದರೆ; ಸುಂದರ ಕಲಾತ್ಮಕತೆಯನ್ನು ಅನಾವರಣಗೊಳಿಸಿದ ಶಿಲ್ಪಿಗಳು ಬೇರೊಬ್ಬ ರಾಜನಿಗೆ ಅಷ್ಟೇ ವೈಭವಯುತವಾದ ಶಿಲ್ಪಾಕೃತಿಗಳನ್ನು ನಿರ್ಮಿಸಿಕೊಟ್ಟರೆ ತಮ್ಮ ಹೆಸರೆಲ್ಲಿ ಗೌಣವಾಗುತ್ತದೆಯೋ ಎಂಬ ಧೋರಣೆಯಿಂದ ಅವರ ಕೈಯನ್ನು ರಾಜರುಗಳು ಕತ್ತರಿಸಲಾಗುತ್ತಿದ್ದ ಉದಾಹರಣೆಗಳ ಉಲ್ಲೇಖಗಳೂ ಇತಿಹಾಸದ ಪುಟಗಳಲ್ಲಿ ಓದಿಗೆ ಸಿಗುತ್ತವೆ. ಆದ್ದರಿಂದ ಹೆಸರೂ ಬೇಡ, ಇಂತಹ ಅಪಾಯಗಳನ್ನು ಎದುರು ನೋಡುವುದು ಬೇಡ ಎಂಬ ಅಭಿಪ್ರಾಯ ಕೆಲವು ಶಿಲ್ಪಿಗಳಿಗೆ ಅನ್ನಿಸಿರಲೂಬಹುದು. ಆದ್ದರಿಂದ ಅವರು ತಮ್ಮ ಹೆಸರನ್ನು ಮರೆಮಾಚಿದಾಗ ಅವರ ಕೆಲಸ ಕಾರ್ಯಗಳನ್ನು ಗಮನಿಸುತ್ತಿದ್ದ ಸ್ಥಳೀಯರು ಗ್ರಾಮೀಣ ನಾಮಮೂಲವಾಗಿ ಮೌಖಿಕ ಪರಂಪರೆಯೊಂದಿಗೆ ನೆನಪಿಟ್ಟುಕೊಂಡು ಬೆಳೆಸಿಕೊಂಡು ಬಂದಿರಬಹುದು. ಆದರೆ ಹೊಯ್ಸಳರ ವಿಚಾರದಲ್ಲಿ ಹಾಗಾಗಿರಲು ಸಾಧ್ಯವಿಲ್ಲ. ಕಾರಣ ಮಲ್ಲಿತಮ, ನಾಗೋಜ, ದಾಸೋಜ, ಮಬ ಎಂಬ ಶಿಲ್ಪಿಗಳು ಈಗಾಗಲೇ ಇವರ ಕಾಲದ ವ್ಯಕ್ತಿತ್ವಗಳಾಗಿ ನಾಮಾಂಕಿತರಾಗಿದ್ದಾರೆ. ಎಂದರೆ ಡಂಕಣ ಮತ್ತು ಜಕಣ ಇವರಲ್ಲೇ ಇನ್ನೊಂದು ಹೆಸರನ್ನು ಹೊಂದಿರುವ ಕೀರ್ತಿ ಶ್ರೇಷ್ಠರು ಎಂದುಕೊಳ್ಳೋಣವೇ?

ಇನ್ನು ಕವಿಗಳಿಗೆ ಆಶ್ರಯದಾತರಾಗಿದ್ದ ಹೊಯ್ಸಳರ ಕಾಲಘಟ್ಟದಲ್ಲಿ ಅನೇಕ ಕೃತಿಗಳು ರಚನೆಗೊಂಡು ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಈಗಲೂ ಅವು ಚರ್ಚೆ, ವಿಮರ್ಶೆ, ಜಿಜ್ಞಾಸೆ, ವ್ಯಾಖ್ಯಾನಕ್ಕೆ ಒಳಪಟ್ಟು ಹೊಯ್ಸಳರ ಸಾಹಿತ್ಯ ಪ್ರೀತಿಯನ್ನ ನಮಗೆ ಆಗಾಗ ನೆನಪಿಸಿಕೊಳ್ಳುವಲ್ಲಿ ಭಾವ ಸೇತುವಂತೆ ಕಂಡುಬರುತ್ತಿವೆ. ಅವುಗಳಲ್ಲಿ ರಾಜಾದಿತ್ಯ 'ವ್ಯವಹಾರ ಗಣಿತ', ನಯಸೇನ 'ಧರ್ಮಾಮೃತ', ಸುಮನೋಬಾಣ 'ಜೈನ ಪುರಾಣ', ಜನ್ನ 'ಯಶೋಧರ ಚರಿತೆ', 'ಅನಂತನಾಥ ಪುರಾಣ', ಹರಿಹರ 'ಗಿರಿಜಾ ಕಲ್ಯಾಣ', ಹರಿಶ್ಚಂದ್ರ ಕಾವ್ಯ ಖ್ಯಾತಿಯ ಕವಿ ರಾಘವಾಂಕ 'ಸಿದ್ಧರಾಮ ಪುರಾಣ', ಮಲ್ಲಿಕಾರ್ಜುನ 'ಸ್ಪೂರ್ತಿ ಸುಧಾರ್ಣವ', ಅಭಿನವ ಪಂಪನೆಂದೆ ಹೆಸರಾಗಿದ್ದ ನಾಗಚಂದ್ರ 'ರಾಮಚಂದ್ರಚರಿತ ಪುರಾಣ', 'ಮಲ್ಲಿನಾಥ ಪುರಾಣ', ಕನ್ನಡದ ಪ್ರಥಮ ಕವಯತ್ರಿ ಎಂದು ಗುರುತಿಸುತ್ತಿರುವ ಕಂತಿ 'ಸಮಸ್ಯಾ ಪುರಾಣ', ಕನ್ನಡದ ಪ್ರಮುಖ ಔಷಧಶಾಸ್ತ್ರ ಕೃತಿ ಎಂದುಕೊಳ್ಳುವ ಸೋಮನಾಥನ 'ಕರ್ನಾಟಕ ಕಲ್ಯಾಣಕಾರಕ', ಅದರಂತೆ ರಾಮಾನುಜಚಾರ್ಯ ಹಾಗೂ ಮಧ್ವಾಚಾರ್ಯರ ಕೆಲವು ಕೃತಿಪೂರಕ ಬರಹಗಳು.. ಒಂದೇ, ಎರಡೇ? ಎಂದು ಹೆಮ್ಮೆಯಿಂದ ಹೇಳಿಕೊಳ್ಳುವಷ್ಟು ಉತ್ಕೃಷ್ಟವಾಗಿವೆ. ಅಂದ ಹಾಗೆ ಹೊಯ್ಸಳ ರಾಜರು ಪರಧರ್ಮ ಸಹಿಷ್ಣುಗಳು ಆಗಿದ್ದಂತೆ ಅವರ ಆಸರೆಯ ಬಹುತೇಕ ಕವಿಗಳು ಜಾತ್ಯಾತೀತವಾದ ಮಾನವೀಯ ಸಾಹಿತ್ಯವನ್ನು ಕನ್ನಡದಲ್ಲಿ ಉಣಬಡಿಸಿರುವುದು ಒಂದು ಅನನ್ಯ ಇತಿಹಾಸಕ್ಕೆ ಸವಿ ಮಾದರಿಯೂ ಆಗಿದೆ.

ಇಂತೊಂದು ಭವ್ಯ ಸುಂದರ ಮನದ ಸಾಂಸ್ಕೃತಿಕ ಪ್ರೀತಿಯ ಹೊಯ್ಸಳರ ಮೂಲತಾಣ ಮೂಡಿಗೆರೆ ತಾಲ್ಲೂಕಿನ ಒಂದು ಪುಟ್ಟಹಳ್ಳಿ ಸೊಸೆವೂರು

ಆಗಿತ್ತು. ಹೀಗಾಗಿ ಈ ಐತಿಹಾಸಿಕವಾದ ವಿಚಾರ, ಸಂಗತಿ ಇತಿಹಾಸದ ಕಾಲಗರ್ಭದಲ್ಲಿರುವ ಅನರ್ಘ್ಯ ರತ್ನದಂತಹ ವಿಷಯ ವಸ್ತು ಕೂಡ ಆಗಿದೆ. ಈಗಾಗಲೇ ಇದರ ಕುರಿತು ಅನೇಕ ಸಂಶೋಧನೆಗಳು ಆಗಿವೆ. ಕೃತಿಗಳಲ್ಲೂ ಅಕ್ಷರಗಳಾಗಿ ಅರಳಿ ನಿಂತು ಓದಿಸಿಕೊಳ್ಳುತ್ತಿವೆ. ಇನ್ನೂ ಇದು ಆಗಬೇಕಿದೆ. ಹಾಗಾಗಲಿ ಎಂದು ಆಶಿಸುತ್ತಾ ಹೊಯ್ಸಳರ ಸಾಮ್ರಾಜ್ಯ ಸದಾಶಯಕ್ಕೆ ನಿರಂತರವಾಗಿ 'ಜಯವಾಗುತ್ತಲಿರಲಿ..' ಎಂದು ಜಯಘೋಷ ಹಾಕುತ್ತಿರೋಣ.

**ಆಕರಗಳು**


1. ಪಿ .ಆರ್. ಮುಜಿಮ್ದಾರ್, ಆರ್. ಕೆ. ಭಾರಧ್ವಾಜ್, ಆರ್. ಸಿ. ಚೌಧರಿ, 1998, ಕರ್ನಾಟಕ ಪ್ರೌಢ ಇತಿಹಾಸ, ಲಕ್ಷ್ಮೀ ಪ್ರೀಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು – 570001
2. ಡಾ. ಬಸವರಾಜ ಎಸ್. ಅಕ್ಕಿ, 2004, ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ, ಸೋಮೇಶ್ವರ ಪ್ರಕಾಶನ, ಧಾರವಾಡ – 580008.